## ಅದೇ ಅಂತ ಅಂದ್ಕೊಂಡಿದ್ದೆ...

ಅಂದು ಗುಂಡ ಮನೆಗೆ ಊಟಕ್ಕೆ ಬಂದಾಗ ತಡವಾಗಿತ್ತು. ಅವನ ಹೆಂಡತಿ ಸುಬ್ಬಿ ಇಬ್ಬರಿಗೂ ತಟ್ಟೆಯಲ್ಲಿ ಊಟ ಬಡಿಸಿಕೊಂಡು ಕಾಯುತ್ತಿದ್ದಳು. ತಡವಾಗಿ ಬಂದ ಗುಂಡ, ಕೈ ತೊಳೆದು ಊಟಕ್ಕೆ ಕೂಡುತ್ತ, 'ತಟ್ಟೆಯಲ್ಲಿ ಊಟ ಬಡಿಸಿಕೊಂಡು ಯಾಕೆ ಕಾಯ್ತಾ ಕೂತಿದ್ದೆ? ತಡವಾಯ್ತಲ್ಲ, ಊಟ ಮಾಡಿ ಮಲಗಬಾರದಿತ್ತಾ?' ಎಂದ. ಅದಕ್ಕೆ ಸುಬ್ಬಿ, 'ಒಬ್ಬಳೇ ಕೂತು ತಿನ್ನೋಕೆ ನಾನೇನು ಗೂಬೆನಾ?' ಅಂದಳು. 'ಅಲ್ವಾ ಹಾಗಿದ್ರೆ? ಇಷ್ಟು ದಿನ ನಾನು ಅದೇ ಅಂತ ಅಂದ್ಕೊಂಡಿದ್ದೆ' ಎಂದ! ಮೊದಲೇ ಸಿಟ್ಟಿನಲ್ಲಿದ್ದ ಸುಬ್ಬಿ ಉರಿದು ಬಿದ್ದಳು.

**ಎನ್.ಪಿ. ಶೈಲಜ**



## ವೈದ್ಯನ ಉಪಾಯ



'ಡಾಕ್ಟ್ರೆ, ಆಪರೇಷನ್ ಮಾಡಿಸಿಕೊಂಡು ದುಡ್ಡು ಕಟ್ಟದೆ ಯಾಮಾರಿಸಿ ಓಡಾಡ್ತಿದ್ದ ಆ ಕೋಟ್ರೇಶಿ, ನಿನ್ನೆ ಓಡೋಡಿ ಆಸ್ಪತ್ರೆಗೆ ಬಂದ್ನಲ್ಲ... ಏನ್ ಉಪಾಯ ಮಾಡಿದ್ರಿ?' ಎಂದು ನರ್ಸ್ ವೈದ್ಯರನ್ನು ಕುತೂಹಲದಿಂದ ಕೇಳಿದಳು.

'ಏನಿಲ್ಲ ಸಿಸ್ಟರ್, ಆಪರೇಷನ್ ಮಾಡುವಾಗ ನಿನ್ನ ಹೊಟ್ಟೆಯಲ್ಲಿ ಕತ್ತರಿ ಇಟ್ಟು ಮರೆತು ಹೊಲಿಗೆ ಹಾಕಿ ಬಿಟ್ಟಿದ್ದೀವಿ. ಅದನ್ನು ಹೊರತೆಗೆಯಬೇಕು. ಆದಷ್ಟು ಬೇಗ ಬಾ ಅಂತ ವಾಟ್ಸ್ಆ್ಯಪ್ ಮೆಸೇಜ್ ಕಳಿಸಿದ್ದೆ!...' ಎಂದು ಮುಗುಳ್ನಕ್ಕರು ವೈದ್ಯರು.

**ಶೋಭಾ ಪ್ರಮೋದ್**

ಚಿತ್ರಗಳು: ಗಣೇಶ ಆಚಾರ್ಯ